ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಹೌದು.

ಆ) ಸಾಮಾನ್ಯ ಪರಿಸ್ಥಿತಿಯಲ್ಲಿ ರಾಜ್ಯದ ಅಂತಹ ತನಿಖೆಗಳನ್ನು ನವದೆಹಲಿಯ ವಿಶೇಷ ಪೋಲೀಸ್ ಸಿಬ್ಬಂದಿಯಿಂ ನಡೆಸುವುದಕ್ಕಿಂತ, ರಾಜ್ಯದ ಪೋಲೀಸರೇ ನಡೆಸುವುದು ಹೆಚ್ಚು ಸೂಕ್ತವೆಂದು ಭಾವಿಸಲಾಯಿತು.

ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಐಪಿಎಸ್ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ಭಾರತ ಸರ್ಕಾರಕ್ಕೆ ಕಳುಹಿಸಿರುವುದು

೨೯೨೨. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಐದು ವರ್ಷಗಳಿಂದ ಈಚೆಗೆ ಎಷ್ಟು ಜನ ಐಪಿಎಸ್ ಅಧಿಕಾರಿಗಳನ್ನು ಭಾರತ ಸರ್ಕಾರಕ್ಕೆ ನಿಯೋಜನೆ ಮೇರೆಗೆ ಕಳುಹಿಸಲಾಗಿಲ್ಲ ?

ಆ) ಅಂತಹ ಅಧಿಕಾರಿಗಳ ಹೆಸರು ಮತ್ತು ಅವರನ್ನು ಭಾರತ ಸರ್ಕಾರಕ್ಕೆ ನಿಯೋಜನೆ ಮೇರೆಗೆ ಕಳುಹಿಸದೇ ಇದ್ದುದರ ಬಗ್ಗೆ ಕಾರಣಗಳನ್ನು ತಿಳಿಸುವುದು ?

ಇ) ಯಾವಾಗ ಅವರನ್ನು ನಿಯೋಜನೆಯ ಮೇರೆಗೆ ಕಳುಹಿಸುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ಒಟ್ಟು ೧೦೫ ಐಪಿಎಸ್ ಅಧಿಕಾರಿಗಳ ಪೈಕಿ ೫೫ ಐಪಿಎಸ್ ಅಧಿಕಾರಿಗಳನ್ನು ೫ ವರ್ಷಗಳಿಂದ ಈಚೆಗೆ ಭಾರತ ಸರ್ಕಾರಕ್ಕೆ ನಿಯೋಜನೆಯ ಮೇರೆಗೆ ಕಳುಹಿಸಿಲ್ಲ.

ಆ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕೇಂದ್ರ ಸರ್ಕಾರ ಈ ಅಧಿಕಾರಿಗಳನ್ನು ಆಯ್ಕೆ ಮಾಡಿಕೊಂಡಾಗ ನಿಯೋಜನೆಯ ಮೇರೆಗೆ ಕಳುಹಿಸಿಕೊಡಲಾಗುವುದು.

ಅನುಬಂಧ

ಸಂಖ್ಯೆ	ಹೆಸರು	ನಿಯೋಜನೆಗೆ ಕಳುಹಿಸದೇ ಇರುವ ಕಾರಣಗಳು
೧	೨	೩
೧	ಎ.ಆರ್. ನಿಜಾಮುದ್ದೀನ್	ವೈಯಕ್ತಿಕ ಹಾಗೂ ಆಡಳಿತಾತ್ಮಕ ಕಾರಣಗಳಿಂದಾಗಿ
೨	ಆರ್. ಎಂ. ವಸಂತಕುಮಾರ್	,,
೩	ಎ.ಜೆ. ಆನಂದನ್	,,
೪	ಪಿ. ಕೋದಂಡರಾಮಯ್ಯ	,,
೫	ವಿ ವಿ. ಭಾಸ್ಕರ್	,,
೬	ಎಲ್. ರೇವಣಸಿದ್ಧಯ್ಯ	,,
೭	ಡಾ. ಪಿ. ಎಸ್. ರಂಗಾನುಜಂ	,,
೮	ಎಸ್. ಎಸ್. ಪಾಪಟಿ	,,
೯	ಸೂರತ್ ಪ್ರಸಾದ್	,,

೧	೨	೩
೧೦	ಎಸ್.ಎನ್. ಬೋರ್‌ಕರ್	,,
೧೧	ಎಸ್. ಸಿದ್ಧಲಿಂಗು	,,
೧೨	ಎಸ್. ಭಾಸ್ಕರ್‌ರಾವ್	,,
೧೩	ಅಜೀಯಕುಮಾರ್ ಸಿಂಗ್	,,
೧೪	ಶ್ರೀಮತಿ ಜೀಜಾಹರಿಸಿಂಗ್	,,
೧೫	ಸುಭಾಷ್ ಭರಣಿ	,,
೧೬	ಎಸ್.ಸಿ. ಸಕ್ಸೇನಾ	,,
೧೭	ಎಸ್. ಅಚ್ಯುತ್‌ರಾವ್	,,
೧೮	ಹೆಚ್.ಆರ್. ಕಸ್ತೂರಿ ರಂಗನ್	,,
೧೯	ಡಿ.ಎನ್. ಮುನಿಕೃಷ್ಣ	,,
೨೦	ಕೆ. ನಾರಾಯಣ್ (ಉಮಾನತ್ತಿನಲ್ಲಿ ಇಡಲಾಗಿದೆ)	,,
೨೧	ಬಿ.ಎನ್. ನಾಗರಾಜ್	,,
೨೨	ಎಸ್.ಎಸ್. ಮುಸಳಿ	,,
೨೩	ಕೆ.ಎಸ್. ಮೆಂಡೇಗಾರ್	,,
೨೪	ಬಿ.ವೈ. ಭೋಸ್ಲೆ	,,
೨೫	ಎ.ಆರ್. ಇನ್‌ಪ್ಯಾಂಟ್	,,
೨೬	ಎಸ್.ಎಂ. ಬಿದರಿ	,,
೨೭	ಕುಚ್ಚಣ್ಣ ಶ್ರೀನಿವಾಸನ್	,,
೨೮	ಡಿ.ಪಿ. ನೇಗಿ	,,
೨೯	ಬಿ ಇ. ಉಮಾಪತಿ	,,
೩೦	ಓಂ ಪ್ರಕಾಶ್	,,
೩೧	ಕೆಂಪಯ್ಯ	,,
೩೨	ಬಿಪಿನ್ ಗೋಪಾಲಕೃಷ್ಣ	ಕ್ರಮ ಸಂಖ್ಯೆ ೩೨ ರಿಂದ ೫೫ರ ವರೆಗಿನ ಐಪಿಎಸ್
೩೩	ಪ್ರಭಾ ಹೆಚ್. ರಾವ್	ಅಧಿಕಾರಿಗಳು ನಿಗದಿತ ೭ ವರ್ಷ ಸೇವೆಯನ್ನು
೩೪	ನೀಲಮಣಿ ಶ್ರೀವಾಸ್ತವ	ಮುಗಿಸಿಲ್ಲ, ಆದ್ದರಿಂದ ಅವರನ್ನು ಭಾರತ ಸರ್ಕಾರಕ್ಕೆ
೩೫	ಕೆ.ಎಸ್. ಸುರೇಶಬಾಬು	ನಿಯೋಜನೆ ಮೇರೆಗೆ ಕಳುಹಿಸಲು ಬರುವುದಿಲ್ಲ.
೩೬	ಚಂದ್ರಶೇಖರ್	,,
೩೭	ವೈ.ಆರ್ ಪಾಟೀಲ್	,,
೩೮	ಆರ್ ಸಿ. ನಾಯಕ್	,,
೩೯	ಕೆ.ವಿ.ಆರ್. ಟ್ಯಾಗೋರ್	,,
೪೦	ಬಿ.ಜಿ. ಕೊಠಟನೂರ್	,,
೧	ಎಂ. ಲಕ್ಷ್ಮಣ	,,
೨	ಜಿ.ವಿ. ಗೌಂಡ್‌ಕರ್	,,
೪೩	ಕೆ.ಎಸ್.ಎನ್. ಚಿಕ್ಕೇರೂರು	,,
೪೪	ಬಿ.ಜಿ.ಜೆ. ಮಿರ್ಜಿ	,,
೪೫	ಟಿ. ಜಯಪ್ರಕಾಶ್	,,
೪೬	ಸಿ. ಜ್ಯೋತಿರಾವ್	,,
೪೭	ಕೆ.ಸಿ. ರಾಮಮೂರ್ತಿ	,,
೪೮	ವಾಳಗವೇಲಿ ನಾರಾಯಣ ಶೆಟ್ಟಿ	,,
೪೯	ಪೆಚ್-ಸಿ. ಕಿಶೋರ ಚಂದ್ರ	,,

೫೦	ಪ್ರೇಮಂಶಂಕರ ವಿೋನ	,,
೫೧	ಆಷಿತ್ ಮೋಹನ್ ಪ್ರಸಾದ್	,,
೫೨	ಹೆಚ್.ಎನ್. ಸತ್ಯನಾರಾಯಣರಾವ್	,,
೫೩	ಪ್ರವೀಣಸೂದ್	,,
೫೪	ಪದಮ್‌ಕುಮಾರ್‌ಗಾರ್ಗ್	,,
೫೫	ಕೆ.ವಿ. ಗಗನದೀಪ	,,

ಒಂಬತ್ತನೆಯ ವಿತ್ತೀಯಂ ಆಯೋಗದ ವರದಿ

೨೮೫೫ ಶ್ರೀ ಆರ್. ವೇಕಟರಾಮಯ್ಯ, (ಮುಳಬಾಗಲು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಶ್ರೀ ಎನ್. ಕೆ. ಪಿ. ನಾಲ್ಕೆಯವರ ಅಧ್ಯಕ್ಷತೆಯ ಒಂಭತ್ತನೆಯ ವಿತ್ತೀಯ ಆಯೋಗವು ಭಾರತ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿದೆಯೇ?

ಆ) ವರದಿ ಸಲ್ಲಿಸಿದ್ದಲ್ಲಿ ಆಯೋಗದ ಶಿಫಾರಸ್ಸಿನ ಮೇರೆಗೆ ಕರ್ನಾಟಕ ರಾಜ್ಯಕ್ಕೆ ಯಾವ ಹೆಚ್ಚುವರಿ ಸವಲತ್ತುಗಳು ಲಭ್ಯವಿದೆ? (ವಿವರ ಒದಗಿಸುವುದು).

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ಒಂಭತ್ತನೆಯ ವಿತ್ತೀಯ ಆಯೋಗವು ಆರ್ಥಿಕ ವರ್ಷ ೧೯೮೯–೯೦ ಒಳಗೊಂಡಂತೆ ತನ್ನ ಮೊದಲ ವರದಿಯನ್ನು ದಿನಾಂಕ ೨೯–೭–೧೯೮೮ ರಂದು ಭಾರತ ಸರ್ಕಾರಕ್ಕೆ ಸಲ್ಲಿಸಿದೆ.

ಪ್ರಾಥಮಿಕ ಶಿಕ್ಷಣ.

ಆ) ೧೯೮೯–೯೦ರ ಸಾಲಿಗೆ ಸಂಬಂಧಿಸಿದಂತೆ ವಿಶಿಷ್ಟ ಸಮಸ್ಯೆಗಳ ವಿಭಾಗದಲ್ಲಿ ಕರ್ನಾಟಕಕ್ಕೆ ಹೆಚ್ಚಿನ ಸವಲತ್ತಾಗಿ ರೂ. ೧೨.೬೪ ಕೋಟಿಗಳನ್ನು ಶಿಫಾರಸ್ಸು ಮಾಡಿದೆ. ಈ ಮೊತ್ತವು ಪ್ರಾಥಮಿಕ ಶಿಕ್ಷಣ ದಡಿಯಲ್ಲಿ ೬ ರಿಂದ ೧೪ ವರ್ಷದ ಒಳಗಿನ ವಿದ್ಯಾರ್ಥಿಗಳಿಗೆ ಅಥವಾ ೧ ರಿಂದ ೮ನೇ ತರಗತಿಗಳಿಗೆ ಶಾಲಾ ಕಟ್ಟಡ ಕಟ್ಟಿಸುವುದಕ್ಕೆ ಸಂಬಂಧಿಸಿದೆ.

ಬರ ಸಾಲ.

ಇ) ೧೯೮೬–೮೭ ಮತ್ತು ೧೯೮೭–೮೮ರಲ್ಲಿ ಬರ ಪರಿಹಾರ ಸಂಬಂಧ ಹೆಚ್ಚುವರಿ ಯೋಜನಾ ಸಹಾಯವಾಗಿ ರಾಜ್ಯಕ್ಕೆ ಕೇಂದ್ರ ಸರ್ಕಾರ ಮಂಜೂರು ಮಾಡಿದ ಸಾಲದ ಅಸಲು ಮತ್ತು ಬಡ್ಡಿಯ ಮೊತ್ತವನ್ನು ೧೯೮೯–೯೦ರಲ್ಲಿ ಮರುಪಾವತಿ ಮಾಡುವುದನ್ನು ಮುಂದಕ್ಕೆ ಹಾಕುವಂತೆ ವಿತ್ತೀಯ ಆಯೋಗವು ಶಿಫಾರಸ್ಸು ಮಾಡಿದೆ.

ಈ ಒಂದು ಸೌಲಭ್ಯವು ಎಲ್ಲ ರಾಜ್ಯಗಳಿಗೆ ಒಟ್ಟು ರೂ ೬೩ ಕೋಟಿ ರೂ ಮಟ್ಟಿಗೆ ಸಹಾಯ ನೀಡಿದೆ. ಇದರಲ್ಲಿ ೦.೪೫ ಕೋಟಿ ರೂ ಬಡ್ಡಿ ಮತ್ತು ೦.೩೮ ಕೋಟಿ ರೂ. ಅಸಲು ಮೊತ್ತದ ಸೌಲಭ್ಯ ಕರ್ನಾಟಕಕ್ಕೆ ಲಭ್ಯವಾಗಿದೆ. ಕರ ಮತ್ತು ಸುಂಕದ ಪ್ರಯುಕ್ತ ವರ್ಗಾವಣೆ ಮಾಡುವ ಬಗ್ಗೆ. ಪರಿಹಾರ ಕಾಮಗಾರಿಕೆ ಸಂಬಂಧಪಟ್ಟಂತೆ ಖರ್ಚು ಭರಿಸುವ ಬಗ್ಗೆ ಮತ್ತು ಸಾಲ ಪರಿಹಾರದ ಬಗ್ಗೆ ಆಯೋಗ ಮಾಡಿರುವ ಶಿಫಾರಸ್ಸುಗಳನ್ನು ಭಾರತ ಸರ್ಕಾರವು ಒಪ್ಪಿಕೊಂಡಿದೆ. ರಾಜ್ಯ ಯೋಜನೆಯಲ್ಲಿ ರಾಜಸ್ವ ಭಾಗದ ಅವಶ್ಯಕತೆಯನ್ನು ತುಂಬಿಕೊಳ್ಳುವಲ್ಲಿ ಅನುದಾನದ ಬಗೆಗಿನ ಶಿಫಾರಸ್ಸನ್ನು ಸಹ